
ಕವಿತೆ

# ಕವಿ ಕಂಡ ಕನಸು




(ಚೌಡದಾನಪುರದಲ್ಲಿರುವ
ಅಂಬಿಗರ ಚೌಡಯ್ಯನವರ
ಗದ್ದುಗೆ ಎದುರು ಸ್ವಲ್ಪ
ಹೊತ್ತು...)

ತುಂಗಭದ್ರೆಯ ತಟ. ಸದ್ದುಗದ್ದಲವಿರದೆ
ನೆಲೆಸಿರುವ ಶರಣ ಚೌಡಯ್ಯ
ಚೌಡದಾನಪುರಕ್ಕೆ ಬರುವುದುಂಟೆಂದಾಗ
ಹೇಳಿದ: ನನ್ನೆಡೆ ಬಾರಯ್ಯ
ಮುಕ್ತೇಶ್ವರನ ಕಂಡು ಹೊರಗೆ ಬಂದರೆ ಕೆಳಗೆ
ಹರಿಯುತಿರುವಳು ತುಂಗಭದ್ರೆ
ಆದರೆದುರೆ ಕವಿಮನೆಪುಟ್ಟ ಚಿತ್ರದ ಹಾಗೆ.
ಧರಿಸಿತ್ತು ಶ್ರೀಮೌನಮುದ್ರೆ
ಸದ್ದಿರದೆ ಮೆಟ್ಟಿಲುಗಳಿಳಿದೆ ಗದ್ದುಗೆ ಕಡೆ
ಮೇಯುತಿದ್ದವು ಎರಡು ಹಸು
ಅಲ್ಲೆ ಒಂದೆಡೆ ಕೂತೆ. ಹಾಗೇ ಕಣ್ಮುಚ್ಚಿದೆ.
'ಹಾಲು ಕುಡಿಯುವಿಯಲ್ಲ ತುಸು!'
ಕೇಳಿದ್ದು ಕವಿಗಳು! 'ಖಂಡಿತ' ನಾನಂದೆ.
ಹಾಗೆಯೇ ಮಾತು ಸಾಗಿತ್ತು.